# ಕರ್ನಾಟಕ ಸರ್ಕಾರ
# ರಾಜ್ಯ ಅಬಕಾರಿ ಇಲಾಖೆ
# 2015-16ನೇ ಸಾಲಿನ ಇಲಾಖಾ ವಾರ್ಷಿಕ ವರದಿ

(ದಿನಾಂಕ: 01-04-2015 ರಿಂದ 31-03-2016)

## ಅಧ್ಯಾಯ – 1
## ದೂರ ದೃಷ್ಟಿ, ಧ್ಯೇಯ, ಉದ್ದೇಶ ಮತ್ತು ಕರ್ತವ್ಯಗಳು

**1.1 ದೂರ ದೃಷ್ಟಿ :**

ಸುರಕ್ಷಿತವಲ್ಲದ ಮದ್ಯದ ಬಳಕೆಯನ್ನು ನಿಯಂತ್ರಿಸುವುದರ ಮೂಲಕ ಅಬಕಾರಿ ಆದಾಯದಲ್ಲಿ ಉತ್ತಮತೆಯನ್ನು ಸಾಧಿಸುವುದು ಮತ್ತು ಮದ್ಯ ಬಳಕೆದಾರರಿಗೆ ಆರೋಗ್ಯಕರ ವಾತಾವರಣದಲ್ಲಿ ಮದ್ಯದ ಸರಬರಾಜನ್ನು ಖಾತರಿಪಡಿಸುವುದು

**1.2 ಧ್ಯೇಯ :**

ಮದ್ಯಸಾರ, ಮದ್ಯಸಾರಯುಕ್ತ ತಯಾರಿಕೆಗಳು, ಬಳಕೆಯೋಗ್ಯ ಮದ್ಯ ಮತ್ತು ಇತರೆ ಮತ್ತು ಬರಿಸುವ ಪದಾರ್ಥಗಳ ವಹಿವಾಟು ಹಾಗೂ ಇವುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ, ಮಾರಾಟ ಮತ್ತು ಇತರೆ ಚಟುವಟಿಕೆಗಳನ್ನು ಕ್ರಮಗೊಳಿಸುವುದು ಮತ್ತು ಈ ಚಟುವಟಿಕೆಗಳಿಗೆ ಸಂಬಂಧಪಟ್ಟ ರಾಜ್ಯ ಅಬಕಾರಿ ರೀತಿ-ನೀತಿಯನ್ನು ಜಾರಿಗೊಳಿಸುವುದು ಹಾಗೂ ಸಂಬಂಧಿತ ತೆರಿಗೆ ಸಂಗ್ರಹಣೆಯ ಮೇಲುಸ್ತುವಾರಿ ಕೈಗೊಳ್ಳುವುದು.

**1.3 ಉದ್ದೇಶಗಳು :**

1. ರಾಜ್ಯದ ಬೊಕ್ಕಸಕ್ಕೆ ಆದಷ್ಟು ಹೆಚ್ಚಿನ ರಾಜಸ್ವವನ್ನು ಸಂಗ್ರಹಿಸುವುದು
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟವನ್ನು ಕ್ರಮಬದ್ಧಗೊಳಿಸುವುದು
3. ಅಬಕಾರಿ ಸಂಬಂಧಿತ ಅಪರಾಧಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಜಾರಿ ಮತ್ತು ತನಿಖೆ
4. ಸಮರ್ಥತೆಯನ್ನು ಉತ್ತಮಪಡಿಸಲು ತರಬೇತಿ ನೀಡುವುದು ಮತ್ತು ಇ-ಆಡಳಿತ ಉಪಕ್ರಮಗಳನ್ನು ರೂಪಿಸುವುದು.

**1.4 ಕಾರ್ಯಗಳು :**

1. ಅಬಕಾರಿ ರಾಜಸ್ವ ಸಂಗ್ರಹಣೆ
2. ಎಲ್ಲಾ ಅಬಕಾರಿ ವಸ್ತುಗಳ ಉತ್ಪಾದನೆ, ಸಾಗಾಣಿಕೆ, ಹೊಂದುವಿಕೆ ಮತ್ತು ಮಾರಾಟಕ್ಕಾಗಿ ಸನ್ನದುಗಳನ್ನು ನೀಡುವುದು.
3. ನಿರ್ದಿಷ್ಟ ಅಬಕಾರಿ ಸನ್ನದು ಪ್ರದೇಶಗಳ ತಪಾಸಣೆ ಕೈಗೊಳ್ಳುವುದು, ನಿಯತವಾಗಿ ದಾಳಿ ಮತ್ತು ರಸ್ತೆ ಗಸ್ತುಗಳನ್ನು ನಡೆಸುವುದು.
4. ಇಲಾಖೆಯ ವಿವಿಧ ಆಡಳಿತ ಹಂತಗಳಲ್ಲಿನ ಸಾಧನೆಯನ್ನು ನಿಯತ ಮಧ್ಯಂತರ ಅವಧಿಗಳಲ್ಲಿ ಪುನರ್ವಿಮರ್ಶಿಸುವುದು.
5. ಅಧಿಕಾರಿಗಳು ಮತ್ತು ಸಿಬ್ಬಂದಿಯ ತರಬೇತಿ.
6. ಅಬಕಾರಿ ಪರಿಶೀಲನಾ ಪ್ರಮಾಣ ಪತ್ರಗಳು (EVC) ಮತ್ತು ರಹದಾರಿ ಪ್ರಮಾಣ ಪತ್ರಗಳ ಪರಿಶೀಲನೆ.
7. ಅಬಕಾರಿ ಅಪರಾಧ ಪ್ರಕರಣಗಳ ನೋಂದಣಿ, ತನಿಖೆ ಹಾಗೂ ಕಾನೂನು ಕ್ರಮ ಜರುಗಿಸುವುದು.

8. ಎಲ್ಲಾ ಅಬಕಾರಿ ಸಂಬಂಧಿತ ವಸ್ತುಗಳ ವಹಿವಾಟಿನ ಮೇಲುಸ್ತುವಾರಿ.
9. ಇಲಾಖೆಯ ಕಾರ್ಯಚಟುವಟಿಕೆಗಳ ಗಣಕೀಕರಣ.

**ಅ. ರಾಜ್ಯ ಮಟ್ಟದ ಅಧಿನಿಯಮಗಳು** :

1. ಕರ್ನಾಟಕ ಅಬಕಾರಿ ಕಾಯ್ದೆ 1965.
2. ಕರ್ನಾಟಕ ಪಾನ ನಿರೋಧ ಕಾಯ್ದೆ 1961.
3. ಮೇಲ್ಕಂಡ ಕಾಯ್ದೆಗಳ ಮೇರೆಗೆ ರಚಿತವಾದ ನಿಯಮಗಳು.
4. ನಾರ್ಕೊಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ (ಕರ್ನಾಟಕ) ನಿಯಮಗಳು 1985.
5. ಕರ್ನಾಟಕ ಪ್ರಿವೆಂಶನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್‌ಲೆಗ್ಗರ್ಸ್, ಡ್ರಗ್ ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್ ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಕಾಯ್ದೆ 1985.

**ಆ. ಕೇಂದ್ರ ಮಟ್ಟದ ಅಧಿನಿಯಮಗಳು** :

1. ಮೆಡಿಸಿನಲ್ ಅಂಡ್ ಟಾಯ್ಲೆಟ್ ಪ್ರಿಪರೇಷನ್ಸ್ (ಎಕ್ಸೈಜ್ ಡ್ಯೂಟೀಸ್) ಕಾಯ್ದೆ, 1955 ಮತ್ತು ನಿಯಮಗಳು 1956
2. ನಾರ್ಕೊಟಿಕ್ ಡ್ರಗ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ ಕಾಯ್ದೆ 1985 (1985ರ ಕೇಂದ್ರ ಕಾಯ್ದೆ ಸಂಖ್ಯೆ 61)

**1.5 ಸಂಘಟನೆ ಮತ್ತು ರಚನೆ** :

**1.5.1** ಅಬಕಾರಿ ಆಯುಕ್ತರು ಹಿರಿಯ ಐ.ಎ.ಎಸ್. ಶ್ರೇಣಿಯವರಾಗಿದ್ದು ಇಲಾಖೆಯ ಮುಖ್ಯಸ್ಥರಾಗಿದ್ದಾರೆ. ಇಲಾಖೆಯ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿರುತ್ತದೆ. ಇಲಾಖೆಯ ವ್ಯವಹಾರಗಳಲ್ಲಿ ಅಬಕಾರಿ ಆಯುಕ್ತರಿಗೆ ಸಹಕರಿಸಲು ಹೆಚ್ಚುವರಿ ಅಬಕಾರಿ ಆಯುಕ್ತರು (ಅಪರಾಧ ಮತ್ತು ಜಾರಿ), ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ತ.ಮ), ಅಲ್ಲದೆ ಅಬಕಾರಿ ಜಂಟಿ ಆಯುಕ್ತರು (ಡಿಸ್ಟಲರಿ ಮತ್ತು ಬ್ರಿವರಿ), ಉಪ ಆಯುಕ್ತರು (ಆಡಳಿತ), ಒಬ್ಬರು ಅಬಕಾರಿ ಉಪ ಆಯುಕ್ತರು (ಕಾನೂನು), ಅಬಕಾರಿ ಆಯುಕ್ತರ ಕೇಂದ್ರ ಸ್ಥಾನಿಕ ಸಹಾಯಕರು I ಮತ್ತು II (ಅಬಕಾರಿ ಅಧೀಕ್ಷಕರ ಶ್ರೇಣಿ) ಒಳಗೊಂಡಂತೆ 5 ಅಬಕಾರಿ ಅಧೀಕ್ಷಕರು. 6 ಅಬಕಾರಿ ಉಪ ಅಧೀಕ್ಷಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ನಿಯೋಜನೆ ಮೇರೆಗೆ ಒಬ್ಬರು ಉಪ ನಿರ್ದೇಶಕರು (ಸಾಂಖ್ಯಿಕ), ಒಬ್ಬರು ಸಹಾಯಕ ನಿರ್ದೇಶಕರು (ಸಾಂಖ್ಯಿಕ), ಮಹಾಲೇಖಪಾಲರ ಕಛೇರಿಯಿಂದ ನಿಯೋಜನೆ ಮೇರೆಗೆ ಒಬ್ಬರು ಹಿರಿಯ ಲೆಕ್ಕಾಧಿಕಾರಿಗಳು ಮತ್ತು ಒಬ್ಬರು ಹಿರಿಯ ಆಡಿಟ್ ಅಧಿಕಾರಿಗಳು (ಲೆಕ್ಕ ಪರಿಶೋದನೆ) ಅಬಕಾರಿ ಆಯುಕ್ತರಿಗೆ ಸಹಾಯಕರಾಗಿರುತ್ತಾರೆ.

**1.5.2. ರಾಜ್ಯ ಅಬಕಾರಿ ವಿಚಕ್ಷಣ ದಳ, ಬೆಂಗಳೂರು** :

ಅಬಕಾರಿ ಜಂಟಿ ಆಯುಕ್ತರವರ ನೇತೃತ್ವದಲ್ಲಿರುವ ರಾಜ್ಯ ಅಬಕಾರಿ ವಿಚಕ್ಷಣ ದಳವು ರಾಜ್ಯ ಕಾರ್ಯವ್ಯಾಪ್ತಿ ಅಧಿಕಾರ ಹೊಂದಿದ್ದು, ಬೆಂಗಳೂರು ಇದರ ಕೇಂದ್ರಸ್ಥಾನವಾಗಿದ್ದು, ಅಬಕಾರಿ ಆಯುಕ್ತರ ನೇರ ನಿಯಂತ್ರಣದಲ್ಲಿ ಕೆಲಸ ಮಾಡುತ್ತದೆ. ವಿಚಕ್ಷಣೆ, ಮಾಹಿತಿ ಪೂರೈಕೆ, ಕಳ್ಳಭಟ್ಟಿ ತಯಾರಿಕೆ, ನಕಲಿ ಮದ್ಯ ತಯಾರಿಕೆ, ಅಕ್ರಮ ಮದ್ಯ ಹಾಗೂ ಮದ್ಯಸಾರದ ಸಾಗಾಣಿಕೆ, ಅಬಕಾರಿ ಶುಲ್ಕ ತಪ್ಪಿಸಿಕೊಳ್ಳುವುದು ಇತ್ಯಾದಿ ಅಬಕಾರಿ ನಿಯಮಗಳ ಉಲ್ಲಂಘನೆ ತಡೆಯುವಲ್ಲಿ ಅಬಕಾರಿ ಆಯುಕ್ತರಿಗೆ ಒತ್ತಾಸೆಯಾಗಿ ಕಾರ್ಯನಿರ್ವಹಿಸುತ್ತದೆ. ಅದರ ಜೊತೆಗೆ ಬೆಂಗಳೂರು ನಗರದಲ್ಲಿ 4 ವಿಚಕ್ಷಣ ದಳಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ದಳಕ್ಕೆ ಅಬಕಾರಿ ಅಧೀಕ್ಷಕರೊಬ್ಬರು ಮುಖ್ಯಸ್ಥರಾಗಿದ್ದು, ಇವರು ಅಬಕಾರಿ ಉಪ ಆಯುಕ್ತರು ನಗರ ಜಿಲ್ಲೆ (ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ) ಇವರ ಆಡಳಿತಾತ್ಮಕ ನಿಯಂತ್ರಣಕ್ಕೆ

ಒಳಪಟ್ಟಿದ್ದು, ಅಬಕಾರಿ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಜಾರಿ ಮತ್ತು ತನಿಖಾ ಕಾರ್ಯ ನಿರ್ವಹಿಸಲು ಸಹಕರಿಸುತ್ತಿರುತ್ತಾರೆ.

**1.5.3. ಜಾರಿ ಮತ್ತು ತನಿಖಾ ವಿಭಾಗಗಳು :**

ಮುಂದುವರೆದಂತೆ, ಇಲಾಖೆಯ ಆಡಳಿತಾತ್ಮಕ ಕಾರ್ಯಕ್ಷಮತೆ ಹೆಚ್ಚಿಸಲು ಹಾಗೂ ಜಾರಿ ಮತ್ತು ತನಿಖೆ ಕೆಲಸ ನಿರ್ವಹಣೆಯನ್ನು ಚುರುಕುಗೊಳಿಸಲು ರಾಜ್ಯವನ್ನು 6 ವಿಭಾಗಗಳನ್ನಾಗಿ ವಿಂಗಡಿಸಿದೆ. ಪ್ರತಿಯೊಂದು ವಿಭಾಗವು ಅಬಕಾರಿ ಜಂಟಿ ಆಯುಕ್ತರವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರತಿ ವಿಭಾಗದ ಅಧಿಕಾರ ವ್ಯಾಪ್ತಿ ಈ ಕೆಳಕಂಡಂತಿದೆ.

| ಕ್ರ.ಸಂ. | ವಿಭಾಗಗಳು | ವ್ಯಾಪ್ತಿಗೊಳಪಡುವ ಜಿಲ್ಲೆಗಳು |
|---|---|---|
| 1 | ಬೆಂಗಳೂರು ವಿಭಾಗ | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು. |
| 2 | ಬೆಳಗಾವಿ ವಿಭಾಗ | ಬೆಳಗಾವಿ, ಬಿಜಾಪೂರ, ಬಾಗಲಕೋಟೆ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳು. |
| 3 | ಗುಲ್ಬರ್ಗಾ ವಿಭಾಗ | ಗುಲ್ಬರ್ಗಾ, ರಾಯಚೂರು ಮತ್ತು ಬೀದರ್, ಯಾದಗಿರಿ ಜಿಲ್ಲೆಗಳು. |
| 4 | ಹೊಸಪೇಟೆ ವಿಭಾಗ | ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಮತ್ತು ಗದಗ ಜಿಲ್ಲೆಗಳು. |
| 5 | ಮಂಗಳೂರು ವಿಭಾಗ | ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳು. |
| 6 | ಮೈಸೂರು ವಿಭಾಗ | ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. |

**1.5.4** ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಓರ್ವ ಅಬಕಾರಿ ಉಪ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯವರು, ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಇತರೆ ಶಾಸನಬದ್ಧ ಕಾಯ್ದೆಗಳು ಹಾಗೂ ನಿಯಮಗಳಡಿಯಲ್ಲಿ ಅಬಕಾರಿ ಉಪ ಆಯುಕ್ತರು ಶಾಸನಬದ್ಧ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಜಿಲ್ಲೆಗಳಲ್ಲಿನ ಜಾರಿ ತನಿಖಾ ಕಾರ್ಯ ಚಟುವಟಿಕೆಗಳು ಅಬಕಾರಿ ಉಪ ಆಯುಕ್ತರ ಜವಾಬ್ದಾರಿಯಾಗಿರುತ್ತದೆ. ರಾಜ್ಯದ ಬೆಂಗಳೂರು ನಗರ ಜಿಲ್ಲೆಯ 4 ಅಬಕಾರಿ ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು 33 ಅಬಕಾರಿ ಜಿಲ್ಲೆಗಳಿದ್ದು ಪ್ರತಿ ಜಿಲ್ಲೆಗೆ ಒಬ್ಬ ಅಬಕಾರಿ ಉಪ ಆಯುಕ್ತರು ಇರುತ್ತಾರೆ. ಕೇಂದ್ರ ಕಛೇರಿಯಲ್ಲಿ ಒಂದು ಹುದ್ದೆ ಇದ್ದು, ಒಟ್ಟು 34 ಅಬಕಾರಿ ಉಪ ಆಯುಕ್ತರ ಹುದ್ದೆಗಳು ಕಾರ್ಯನಿರ್ವಹಿಸುತ್ತಿವೆ.

**1.5.5.** ಅಬಕಾರಿ ಅಧೀಕ್ಷಕರುಗಳು, ಅಬಕಾರಿ ಉಪ ಅಧೀಕ್ಷಕರುಗಳು, ಅಬಕಾರಿ ನಿರೀಕ್ಷಕರುಗಳು, ಅಬಕಾರಿ ಉಪ ನಿರೀಕ್ಷಕರುಗಳು, ಹಿರಿಯ ರಕ್ಷಕರು ಮತ್ತು ರಕ್ಷಕರು ಇಲಾಖೆಯ ಜಾರಿ ಮತ್ತು ತನಿಖಾ ಚಟುವಟಿಕೆ ನಡೆಸುವ ಹುದ್ದೆಗಳಾಗಿರುತ್ತವೆ. ಅಬಕಾರಿ ಇಲಾಖೆಯಲ್ಲಿ 63 ಉಪ ವಿಭಾಗಗಳು ಅಬಕಾರಿ ಉಪ ಅಧೀಕ್ಷಕರ ಮುಖ್ಯಸ್ಥಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ ಅಬಕಾರಿ ಉಪ ಅಧೀಕ್ಷಕರುಗಳು ಜಿಲ್ಲೆಯ ಅಬಕಾರಿ ಉಪ ಆಯುಕ್ತರ ಆಡಳಿತ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅಬಕಾರಿ ಅಧೀಕ್ಷಕರುಗಳು/ಅಬಕಾರಿ ಉಪ ಅಧೀಕ್ಷಕರುಗಳು/ ಅಬಕಾರಿ ನಿರೀಕ್ಷಕರ ವೃಂದಗಳಲ್ಲಿನ ಅಧಿಕಾರಿಗಳಿಗೆ ಡಿಸ್ಟಿಲರೀಸ್, ಬ್ರಿವರೀಸ್ ಮತ್ತು ವೈನರೀಸ್ ಕಛೇರಿಗಳಲ್ಲಿ ವ್ಯವಹಾರಗಳ ಮೇಲ್ವಿಚಾರಣೆ ನೊಡಲು ಮತ್ತು ಅಬಕಾರಿ ಕಾನೂನನ್ನು ಜಾರಿಗೊಳಿಸಲು ತೈನಾತಿಸಲ್ಪಟ್ಟ ಇತರೆ ಸಿಬ್ಬಂದಿಗಳು ಸಹಕರಿಸುತ್ತಾರೆ. ಅಬಕಾರಿ ಇಲಾಖೆಯು ಮುಖ್ಯ ರಾಸಾಯನಿಕ ತಜ್ಞರ ಮುಖ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಕೇಂದ್ರ ರಾಸಾಯನಿಕ ಪ್ರಯೋಗಾಲಯವನ್ನೂ ಸಹ ಹೊಂದಿದೆ.

### 1.5.6 ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಮೂಲಕ ಸಗಟು ಮದ್ಯ ವಿತರಣೆ.

ಸಗಟು ಮದ್ಯ ವಿತರಣೆಯನ್ನು ವ್ಯವಸ್ಥಿತಗೊಳಸುವ ಹಾಗೂ ಮದ್ಯ ವಹಿವಾಟಿನಲ್ಲಿನ ಅಕ್ರಮ ದಂಧೆಯನ್ನು ತಡೆಗಟ್ಟುವ ಉದ್ದೇಶದಿಂದ 2003 ರಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವನ್ನು ಸಗಟು ವಹಿವಾಟಿನ ಏಕೈಕ ಸಂಸ್ಥೆಯಾಗಿ ಸ್ಥಾಪಿಸಲಾಗಿರುತ್ತದೆ. ಈ ನಿಗಮವು ರಾಜ್ಯಾದ್ಯಂತ ಒಟ್ಟು 55 ಮದ್ಯ ವಿತರಣಾ ಘಟಕಗಳು ಮತ್ತು 38 ಮದ್ಯಸಾರ ಘಟಕಗಳನ್ನು ಹೊಂದಿರುತ್ತದೆ.

## ಅಧ್ಯಾಯ – 2
## ಇಲಾಖೆಯ ಸಾಧನೆಗಳು :

### 2.1 ಆರ್ಥಿಕ :

ಅಬಕಾರಿ ರಾಜಸ್ವವು ಪ್ರಮುಖವಾಗಿ ಈ ಕೆಳಕಂಡ ಮೂಲಗಳಿಂದ ಸಂಗ್ರಹವಾಗುತ್ತದೆ.

1. ಐಎಂಎಲ್ ಮತ್ತು ಬೀರ್ ಮೇಲಿನ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ.
2. ಡಿಸ್ಟಿಲರಿ, ಬ್ರೀವರಿ ಮತ್ತು ವೈನ್ ತಯಾರಿಕಾ ಘಟಕಗಳು ಮತ್ತು ಎಲ್ಲಾ ವಿಧದ ಮದ್ಯ ಮಾರಾಟದ ಸನ್ನದುಗಳ ಸನ್ನದು ಶುಲ್ಕ.
3. ಅಪರಾಧ ಮೊಕದ್ದಮೆಗಳ ದಂಡ ವಿಧಿಸಿ ಇತ್ಯರ್ಥ್ಯ ಮಾಡುವುದರಿಂದ ಮತ್ತು ಮುಟ್ಟುಗೋಲು ಹಾಕಿಕೊಂಡ ವಸ್ತುಗಳ ವಿಲೇವಾರಿಯಿಂದ ಸಂಗ್ರಹವಾಗುವ ಹಣ.
5. ಇತರೆ.

ಅಬಕಾರಿ ರಾಜಸ್ವ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. 1967-68 ರ ಆರ್ಥಿಕ ವರ್ಷದಲ್ಲಿ ರೂ. 7.11 ಕೋಟಿ ಇದ್ದ ರಾಜಸ್ವವು 2014-15 ನೇ ಸಾಲಿಗೆ ರೂ. 13801.19 ಕೋಟಿಗಳಿಗೆ ಏರಿಕೆಯಾಗಿರುತ್ತದೆ. 2015-16 ನೇ ಸಾಲಿನಲ್ಲಿ ರೂ. 15314.65 ಕೋಟಿಗಳಷ್ಟು ರಾಜಸ್ವ ಸಂಗ್ರಹಣೆಯಾಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ರೂ. 1513.46 ಕೋಟಿಗಳ ಹೆಚ್ಚಿನ ರಾಜಸ್ವ ಸಂಗ್ರಹಣೆಯಾಗಿದ್ದು, ಶೇಕಡಾ 10.97 ರಷ್ಟು ಹೆಚ್ಚಳ ಆಗಿರುತ್ತದೆ. ಇಲಾಖೆಯ ಸಂಬಳ ಹಾಗೂ ಸಂಬಳೇತರ ಬಾಬುಗಳಿಗೆ ರೂ. 117.69 ಕೋಟಿ ವೆಚ್ಚವಾಗಿದ್ದು, ಇದು ಆದಾಯದ ಶೇಕಡಾ 0.97 ರಷ್ಟು ಮಾತ್ರವಾಗಿದೆ.

2013-14 ರಿಂದ 2015-15ನೇ ನೇ ಸಾಲಿನವರೆವಿಗೆ ಅಬಕಾರಿ ರಾಜಸ್ವದ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ಮದ್ಯದ ವಿವರಗಳು | 2013-14 | 2014-15 | 2015-16 |
|---|---|---|---|---|
| 1. | ಭಾ.ತ.ಮ | 10,820.09 | 11651.40 | 12808.04 |
| 2. | ಬೀರ್ | 1464.85 | 1570.64 | 1880.34 |
| 3. | ಇತರೆ | 543.38 | 579.15 | 626.27 |
| **ಒಟ್ಟು** | | **12,828.32** | **13801.19** | **15314.65** |

## 2.2 ವೆಚ್ಚ :

2013–14ನೇ ಸಾಲಿನಿಂದ 2015–16ನೇ ಸಾಲಿನವರೆಗೆ ರಾಜಸ್ವ ಸಂಗ್ರಹಣೆ ಮತ್ತು ಅಧಿಕಾರಿ/ನೌಕರರ ಸಂಬಳ ಹಾಗೂ ಇತರೆ ಬಾಬ್ತುಗಳಲ್ಲಿನ ಒಟ್ಟು ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

(ಕೋಟಿ ರೂ.ಗಳಲ್ಲಿ)

| ವಿವರಗಳು | 2013-14 | 2014-15 | 2015-16 |
|---|---|---|---|
| ಅಬಕಾರಿ ರಾಜಸ್ವ ಸಂಗ್ರಹಣೆ | 12,828.32 | 13801.19 | 15314.65 |
| ಒಟ್ಟು ವೆಚ್ಚ | 110.58 | 130.14 | 117.69 |
| **ಶೇಕಡವಾರು ವೆಚ್ಚ** | **0.86%** | **0.94%** | **0.77%** |

## 2.3 ಭೌತಿಕ

### 2.3.1 ಕಾಕಂಬಿ, ಮದ್ಯಸಾರ, ಐಎಂಎಲ್, ಬೀರ್ ಮತ್ತು ವೈನ್ ನ ಉತ್ಪಾದನೆ:–

2012–13 ರಿಂದ 2015–16ನೇ ಸಾಲಿನವರೆಗೆ ಕಾಕಂಬಿ, ಮದ್ಯಸಾರ, ಐ.ಎಂ.ಎಲ್, ಬೀರ್ ಮತ್ತು ವೈನ್ ಉತ್ಪಾದನೆಯ ವಿವರಗಳು ಈ ಕೆಳಕಂಡಂತಿವೆ.

(ಲಕ್ಷ ಬಲ್ಕ್ ಲೀ. ಗಳಲ್ಲಿ)

| ಕ್ರ.ಸಂ. | ವಿವರ | 2013-14 | 2014-15 | 2015-16 |
|---|---|---|---|---|
| 1 | ಕಾಕಂಬಿ (ಲಕ್ಷ ಮೆಟ್ರಿಕ್ ಟನ್) | 16.04 | 17.44 | 18.93 |
| 2 | ಮದ್ಯಸಾರ | 3298.51 | 4071.47 | 5124.48 |
| 3 | ಐ.ಎಂ.ಎಲ್. | 4836.27 | 4950.98 | 5183.36 |
| 4 | ಬೀರ್ | 1874.46 | 1881.91 | 2147.36 |
| 5 | ವೈನ್ | 43.13 | 63.16 | 95.24 |

### 2.3.2 ಐಎಂಎಲ್ ಮತ್ತು ಬೀರ್ ಮಾರಾಟ

2013–14 ರಿಂದ 2015–16ನೇ ಸಾಲಿನವರೆಗೆ ಐ.ಎಂ.ಎಲ್. ಮತ್ತು ಬೀರ್ ಮಾರಾಟದ ವಿವರಗಳು ಈ ಕೆಳಕಂಡಂತಿದೆ.

(ಲಕ್ಷ ಪೆಟ್ಟಿಗೆಗಳಲ್ಲಿ)

| ಕ್ರ.ಸಂ. | ವಿವರ | 2013-14 | 2014-15 | 2015-16 |
|---|---|---|---|---|
| 1 | ಐ.ಎಂ.ಎಲ್. | 526.25 | 559.90 | 566.79 |
| | **ತಿಂಗಳ ಸರಾಸರಿ** | **43.85** | **46.66** | **47.23** |
| 2 | ಬೀರ್ | 243.85 | 253.46 | 270.58 |
| | **ತಿಂಗಳ ಸರಾಸರಿ** | **20.32** | **21.12** | **22.55** |

### 2.3.3. ಅಪರಾಧ ಮತ್ತು ಜಾರಿ

ಪ್ರಸ್ತುತ ವರ್ಷದಲ್ಲಿ ಅಬಕಾರಿ ನಿಯಮಗಳ ಉಲ್ಲಂಘನೆ ತಡೆಗಟ್ಟಲು ಇಲಾಖೆಯ ಅಧಿಕಾರಿಗಳು ಒಟ್ಟು 53,289 ದಾಳಿಗಳನ್ನು ನಡೆಸಿ 21,687 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಈ ಸಂದರ್ಭದಲ್ಲಿ 11,750 ಆರೋಪಿಗಳನ್ನು ಬಂಧಿಸಿರುವುದಲ್ಲದೆ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದ 529 ವಾಹನಗಳನ್ನು ಜಪ್ತು ಮಾಡಲಾಗಿರುತ್ತದೆ. ದಾಳಿ ಸಮಯದಲ್ಲಿ ವಶಪಡಿಸಿಕೊಳ್ಳಲಾದ ಅಬಕಾರಿ ವಸ್ತುಗಳ ವಿವರ ಈ ಕೆಳಕಂಡಂತಿವೆ.

| ಕ್ರ.ಸಂ. | ವಸ್ತುಗಳು | ಪ್ರಮಾಣ (ಲೀ.ಗಳಲ್ಲಿ) |
|---|---|---|
| 1. | ಐಎಂಎಲ್ | 135464 |
| 2. | ಬೀರ್ : ಸೇಂದಿ : ಫೆನ್ನಿ | 92563 |
| 3. | ಮದ್ಯಸಾರ : ಆರ್.ಎಸ್ : ಡಿ.ಎಸ್ | 17411 |
| 4. | ನಾಶಪಡಿಸಿದ ಕಳ್ಳಭಟ್ಟಿ | 8971 |
| 5. | ವಶಪಡಿಸಿಕೊಂಡು ನಾಶಪಡಿಸಿದ ಬೆಲ್ಲದ ಕೊಳೆ | 50215 |

### 2.3.4. ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳು :-

2015-16 ನೇ ಸಾಲಿಗೆ ನವೀಕರಿಸಲಾದ ಡಿಸ್ಟಿಲರಿ, ಬ್ರೀವರಿ ಹಾಗೂ ವೈನರಿ ಘಟಕಗಳ ಸಂಖ್ಯೆ ಈ ಕೆಳಕಂಡಂತಿದೆ.

| ಕ್ರ.ಸಂ. | ಘಟಕ | ಒಟ್ಟು ಘಟಕಗಳ ಸಂಖ್ಯೆ |
|---|---|---|
| 1. | ಪ್ರಾಥಮಿಕ ಘಟಕಗಳು (ಮದ್ಯಸಾರ ತಯಾರಿಕಾ ಘಟಕಗಳು) | 25 |
| 2. | ಸಂಯುಕ್ತ ಡಿಸ್ಟಿಲರಿಗಳು (ಮದ್ಯಸಾರ ಮತ್ತು ಐಎಂಎಲ್ ತಯಾರಿಕಾ ಘಟಕಗಳು) | 07 |
| 3. | ಐಎಂಎಲ್ ತಯಾರಿಕಾ ಘಟಕಗಳು | 26 |
| 4. | ಬ್ರೀವರಿಗಳು | 06 |
| 5 | ವೈನರಿಗಳು<br>ಅ) ಫೋರ್ಟಿಫೈಡ್ ವೈನ್<br>ಆ) ಫ್ರೂಟ್ ವೈನ್ | <br>14<br>17 |

### 2.3.5 ಐ.ಎಂ.ಎಲ್ ಮಾರಾಟ ಸನ್ನದುಗಳು :-

ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳ 1968 ರಂತೆ ಮಂಜೂರು ಮಾಡಲಾದ ವಿವಿಧ ರೀತಿಯ ಐ ಎಂ ಎಲ್ ಮಾರಾಟ ಸನ್ನದುಗಳ ಸಂಖ್ಯೆ ಈ ಕೆಳಕಂಡಂತಿದೆ :

| ಕ್ರ.ಸಂ | ಸನ್ನದುಗಳ ವಿವರ | 2013-14 | 2014-15 | 2015-16 |
|---|---|---|---|---|
| 1. | ಸಿ.ಎಲ್-2 | 3937 | 3938 | 3950 |
| 2. | ಸಿ.ಎಲ್-4 | 213 | 214 | 218 |
| 3. | ಸಿಎಲ್-6ಎ | 58 | 63 | 63 |
| 4. | ಸಿ.ಎಲ್-7 | 780 | 838 | 932 |
| 5. | ಸಿ.ಎಲ್-9 | 3565 | 3574 | 3592 |

| | | | | |
|---|---|---|---|---|
| 6. | ಸಿಎಲ್-11ಸಿ | 383 | 400 | 399 |
| 7. | ಆರ್.ವಿ.ಬಿ. | 308 | 329 | 375 |
| 8. | ಇತರೆ | 377 | 410 | 472 |
| **ಒಟ್ಟು** | | **9621** | **9766** | **10001** |

**2.3.6 ವೈದ್ಯಕೀಯ ಮತ್ತು ಪ್ರಸಾಧನ ಸಾಮಗ್ರಿಗಳ ತಯಾರಿಕೆ :**

ಕೇಂದ್ರ ಕಾಯ್ದೆಯಾದ ಮೆಡಿಸಿನಲ್ ಅಂಡ್ ಟಾಯ್ಲೆಟ್ ಪ್ರಿಪರೇಷನ್ಸ್ (ಎಕ್ಸೈಜ್ ಡ್ಯೂಟೀಸ್) ಕಾಯ್ದೆಯಡಿಯಲ್ಲಿ ಔಷಧೀಯ ಮತ್ತು ಸೌಂದರ್ಯವರ್ಧಕಗಳ ಉತ್ಪನ್ನಗಳ ತಯಾರಿಕೆಗಾಗಿ ಎಲ್-1 ಮತ್ತು ಎಲ್-2 ಸನ್ನದುಗಳನ್ನು ನೀಡಲಾಗುತ್ತವೆ. ಈ ಉತ್ಪನ್ನಗಳಲ್ಲಿ ಮದ್ಯಸಾರ, ಅಫೀಮ್, ಇಂಡಿಯನ್ ಹೆಂಪ್ ಮತ್ತು ಇತರೇ ಮಾದಕ ಔಷಧಿಗಳ ಬಳಕೆ ಇರುತ್ತದೆ. 2015-16ನೇ ಸಾಲಿನಲ್ಲಿ 08 ಎಲ್-1 ಮತ್ತು 06 ಎಲ್-2 ಸನ್ನದುಗಳು ಮಂಜೂರಾಗಿರುತ್ತವೆ.

**2.3.7 ಮದ್ಯಸಾರ ಆಧಾರಿತ ರಾಸಾಯನಿಕ ಕೈಗಾರಿಕೆಗಳು:**

2015-16ನೇ ಸಾಲಿನಲ್ಲಿ 472 ಆರ್ ಎಸ್-2, 98 ಡಿ.ಎಲ್-3, 1 ಡಿ.ಎಲ್-5, 1 ಡಿ.ಎಲ್-6 ಮತ್ತು 2 ಡಿ.ಎಲ್-9 ಸನ್ನದುಗಳನ್ನು ನೀಡಲಾಗಿದೆ.

**2.3.8 ಸೇಂದಿ :**

ಸೇಂದಿ ಉತಾರುದಾರರ ಸಹಕಾರ ಸಂಘಗಳ ಮೂಲಕ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಸೇಂದಿ ಮಾರಾಟ ಮಾಡಲು ಅನುಮತಿ ನೀಡಲಾಗಿರುತ್ತದೆ. ಇದರಿಂದ ಸಂಗ್ರಹವಾಗುವ ರಾಜ್ಯಸ್ವವು ಒಟ್ಟು ರಾಜ್ಯಸ್ವಕ್ಕೆ ಹೋಲಿಸಿದರೆ ಗೌಣವಾಗಿದೆ.

**2.3.9 ಎಂಎಸ್ಐಎಲ್ ಸಂಸ್ಥೆಯ ಮೂಲಕ ಮದ್ಯ ಮಾರಾಟ:-**

ಗರಿಷ್ಟ ಮಾರಾಟ ದರಕ್ಕಿಂತ ಹೆಚ್ಚಿನ ದರಕ್ಕೆ ಮದ್ಯ ಮಾರಾಟ ಮಾಡುವುದನ್ನು ತಡೆಯುವುದು ಹಾಗೂ ಇತರೆ ಮಾರಾಟ ಅಕ್ರಮ ಚಟುವಟಿಕೆಯನ್ನು ತಡೆಗಟ್ಟುವ ದೃಷ್ಟಿಯಿಂದ ಸರ್ಕಾರವು ಎಂಎಸ್ಐಎಲ್ ಸಂಸ್ಥೆಗೆ (ಪ್ರತಿ ತಾಲ್ಲೂಕಿಗೆ ತಲಾ 2 ರಂತೆ) ಒಟ್ಟು 463 ಮದ್ಯ ಮಾರಾಟ ಮಳಿಗೆಗಳನ್ನು (ಸಿ.ಎಲ್11-ಸಿ) ತೆರೆಯಲು ಅನುಮತಿ ನೀಡಿದ್ದು, ಇದುವರೆವಿಗೆ ಸದರಿ ಸಂಸ್ಥೆಯು ಒಟ್ಟು 411 ಕೇಂದ್ರಗಳಲ್ಲಿ ಮದ್ಯ ಮಾರಾಟ ಮಳಿಗೆಗಳನ್ನು ತೆರೆಯಲು ಪೂರ್ವಾನುಮತಿ ನೀಡಿರುತ್ತದೆ.

## ಅಧ್ಯಾಯ - 3

**ಸಾರ್ವಜನಿಕ ಉದ್ದಿಮೆಗಳು, ಸೊಸೈಟಿಗಳು ಮತ್ತು ವಿಶೇಷ ಉದ್ದೇಶಿತ ವಾಹನಗಳ ಸಾಧನೆ**

- ಅಬಕಾರಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ -

## ಅಧ್ಯಾಯ -4

**ತಿದ್ದುಪಡಿ ಮತ್ತು ನೂತನ ಶಾಸನ ಕ್ರಮಗಳು**

**4.1 ತಿದ್ದುಪಡಿಗಳು :**

- ಅಧಿಸೂಚನೆ ಸಂಖ್ಯೆ: ಎಫ್‌ಡಿ 13 ಪಿಇಎಸ್ 2014 ದಿನಾಂಕ: 18.06.2015 ರಂತೆ ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನತೆ, ಸಾಗಾಣಿಕೆ, ಆಮದು ಮತ್ತು ರಫ್ತು) ನಿಯಮಗಳು, 1967 ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ಒಬ್ಬ ವ್ಯಕ್ತಿ

ಹೊಂದಬಹುದಾದ ಮದ್ಯದ ಗರಿಷ್ಠ ಪ್ರಮಾಣವನ್ನು ಮತ್ತು ಚಿಲ್ಲರೆ ಮದ್ಯ ಮಾರಾಟಗಾರರು ಒಂದು ಬಾರಿಗೆ ಒಬ್ಬ ವ್ಯಕ್ತಿಗೆ ಮಾರಾಟ ಮಾಡಬಹುದಾದ ಗರಿಷ್ಠ ಮದ್ಯದ ಪ್ರಮಾಣವನ್ನು 4.6 ಲೀಟರ್‌ಗಳಿಂದ 2.3 ಲೀಟರ್‌ಗಳಿಗೆ ಮರುನಿಗದಿಗೊಳಿಸಲಾಗಿದೆ.

- ಅಧಿಸೂಚನೆ ಸಂಖ್ಯೆ: ಎಫ್‌ಡಿ 66 ಇಎಫ್‌ಎಲ್ 2014 ದಿನಾಂಕ: 09.09.2015 ರಂತೆ ಕರ್ನಾಟಕ ಅಬಕಾರಿ (Rectified Spirits) ನಿಯಮಗಳು, 1967 ರ ನಿಯಮ 4 ಕ್ಕೆ ತಿದ್ದುಪಡಿ ತಂದು ಆರ್‌ಎಸ್-1 ಮತ್ತು ಆರ್‌ಎಸ್-2 ಸನ್ನದು ಶುಲ್ಕಗಳನ್ನು ಪರಿಷ್ಕರಿಸಲಾಗಿದ್ದು, ಆರ್‌ಎಸ್-2 ಸನ್ನದು ನೀಡುವಿಕೆಯಲ್ಲಿನ ಗೊಂದಲವನ್ನು ನಿವಾರಿಸಲಾಗಿದೆ.

- ಅಧಿಸೂಚನೆ ಸಂಖ್ಯೆ: ಎಫ್‌ಡಿ 05 ಪಿಇಎಸ್ 2015 ದಿನಾಂಕ: 06.10.2015 ರಂತೆ ಕರ್ನಾಟಕ ಅಬಕಾರಿ (ಮದ್ಯಸಾರ ಬಿಯರ್, ವೈನ್ ಅಥವಾ ಲಿಕ್ಕರ್ಸ್‌ಗಳ ಇಳುವರಿ, ಉತ್ಪಾದನೆ ಮತ್ತು ನಷ್ಟದ ನಿಯಂತ್ರಣ) ನಿಯಮಗಳು 1998 ರ ಶೆಡ್ಯೂಲ್‌ನ *ಎ* ಗೆ ತಿದ್ದುಪಡಿ ತಂದು ಕಾಕಂಬಿಯಿಂದ ತಯಾರಿಸುವ ಮದ್ಯಸಾರದ ಕನಿಷ್ಟ ಇಳುವರಿಯನ್ನು ಮರುನಿಗದಿಗೊಳಿಸಲಾಗಿದೆ.

- ಅಧಿಸೂಚನೆ ಸಂಖ್ಯೆ: ಎಫ್‌ಡಿ 10 ಪಿಇಎಸ್ 2016 ದಿನಾಂಕ: 30.03.2016 ರಂತೆ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಕ್ಕೆ ತಿದ್ದುಪಡಿ ತಂದು ರೆಕ್ಟಿಫೈಡ್ ಸ್ಪಿರಿಟ್ (ಡಿನೇಚರ್ಡ್ ಅನ್‌ಹೈಡ್ರಸ್ ಎಥನಾಲ್ ಹೊರತುಪಡಿಸಿ) ರಫ್ತಿನ ಮೇಲೆ ಪ್ರತಿ ಲೀಟರ್‌ಗೆ ರೂ.2 ರಂತೆ ಮತ್ತು ಆಮದಿನ ಮೇಲೆ ಪ್ರತಿ ಲೀಟರ್‌ಗೆ ರೂ. 1 ರಂತೆ ಆಡಳಿತಾತ್ಮಕ ಶುಲ್ಕವನ್ನು ವಿಧಿಸಲಾಗಿದೆ ಮತ್ತು ಮದ್ಯ ಮತ್ತು ಬಿಯರ್ ಮೇಲಿನ ಅಬಕಾರಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗಿದೆ.

**4.2 ವರದಿಗಳು ಮತ್ತು ಪ್ರಕಟಣೆಗಳು** :

ಪ್ರತಿ ವರ್ಷ ಅಬಕಾರಿ ವರ್ಷ ಕೊನೆಗೊಂಡ ನಂತರ ಅಬಕಾರಿ ರಾಜಸ್ವ, ಮದ್ಯ ಉತ್ಪಾದನೆ, ಮಾರಾಟ, ಆಮದು ಮತ್ತು ರಫ್ತು, ಪ್ರಚಲಿತ ಲೈಸೆನ್ಸ್ ಶುಲ್ಕ ಮತ್ತು ಅಬಕಾರಿ ಸುಂಕದ ವಿವರಗಳು, ಅಪರಾಧ ಮತ್ತು ಜಾರಿ ಚಟುವಟಿಕೆಗಳು, ವಿವಿಧ ಸನ್ನದುಗಳ ನವೀಕರಣ, ಇಲಾಖೆಯ ಅಧಿಕಾರಿಗಳ ಟೆಲಿಫೋನ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ಈ ವಿವರಗಳನ್ನು ಒಳಗೊಂಡ '**ಅಬಕಾರಿ ಅಂಕಿ ಅಂಶಗಳ ಪ್ರಕಟಣೆ**'ಯನ್ನು ತರಲಾಗುತ್ತಿದೆ.

## ಅಧ್ಯಾಯ – 5

### ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತದಲ್ಲಿನ ಸಾಧನೆಗಳು

5.1 ಇಲಾಖೆಯಲ್ಲಿ ಒಟ್ಟು **5485** ಮಂಜೂರಾದ ಹುದ್ದೆಗಳಿದ್ದು, ಅದರಲ್ಲಿ **3145** ಹುದ್ದೆಗಳನ್ನು ಭರ್ತಿಮಾಡಲಾಗಿದ್ದು, ಇನ್ನುಳಿದ **2340** ಹುದ್ದೆಗಳು ಖಾಲಿಯಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ |
|---|---|---|---|---|---|
| 1 | ಅಬಕಾರಿ ಆಯುಕ್ತರು (ಭಾ.ಆ.ಸೇ) | 67000-79000 | 1 | 1 | 0 |
| 2 | ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ಆ.ಸೇ) (ಕೇಂದ್ರಸ್ಥಾನ ಮತ್ತು ಆಡಳಿತ) | 37400-67000 | 1 | 0 | 1 |
| 3 | ಅಬಕಾರಿ ಜಂಟಿ ಆಯುಕ್ತರು (ಭಾ.ಆ.ಸೇ) | 37400-67000 | 1 | 0 | 1 |
| 4 | ಜಂಟಿ/ಉಪ ಆಯುಕ್ತರು (ಆಡಳಿತ)(ಕೆ.ಎ.ಎಸ್) | 40050-56550 | 1 | 1 | 0 |
| 5 | ಹೆಚ್ಚುವರಿ ಅಬಕಾರಿ ಆಯುಕ್ತರು | 52500-73000 | 2 | 1 | 1 |
| 6 | ಅಬಕಾರಿ ಜಂಟಿ ಆಯುಕ್ತರು | 44250-60600 | 8 | 6 | 2 |
| 7 | ಅಬಕಾರಿ ಉಪ ಆಯುಕ್ತರು | 40050-56550 | 34 | 5 | 29 |
| 8 | ಉಪ ನಿರ್ದೇಶಕರು (ಸಾಂಖ್ಯಿಕ) | 36300-53850 | 1 | 1 | 0 |
| 9 | ಹಿರಿಯ ಲೆಕ್ಕಾಧಿಕಾರಿಗಳು | 15600-39100 | 1 | 1 | 0 |
| 10 | ಹಿರಿಯ ಆಂತರಿಕ ಪರಿಶೋಧಕರು | 15600-39100 | 1 | 0 | 1 |
| 11 | ಅಬಕಾರಿ ಅಧೀಕ್ಷಕರು | 28100-50100 | 94 | 58 | 36 |
| 12 | ಮುಖ್ಯ ರಾಸಾಯನಿಕ ತಜ್ಞರು | 28100-50100 | 1 | 0 | 01 |
| 13 | ಸಹಾಯಕ ನಿರ್ದೇಶಕರು(ಸಾಂಖ್ಯಿಕ) | 22800-43200 | 1 | 1 | 0 |
| 14 | ಅಬಕಾರಿ ಉಪ ಅಧೀಕ್ಷಕರು | 21600-40050 | 105 | 50 | 55 |
| 15 | ಹಿರಿಯ ರಾಸಾಯನಿಕ ತಜ್ಞರು | 21600-40050 | 1 | 0 | 1 |
| 16 | ಕಛೇರಿ ಅಧೀಕ್ಷಕರು | 20000-36300 | 43 | 40 | 03 |
| 17 | ಕಿರಿಯ ರಾಸಾಯನಿಕ ತಜ್ಞರು | 17650-32000 | 2 | 0 | 2 |
| 18 | ಪ್ರಯೊಗಲಾಯ ಸಹಯಕರು | 11600-21000 | 2 | 0 | 2 |
| 19 | ಅಬಕಾರಿ ನಿರೀಕ್ಷಕರು | 20000-36300 | 470 | 251 | 219 |
| 20 | ಸಹಾಯಕ ಲೆಕ್ಕಾಧಿಕಾರಿಗಳು | 9300-34800 | 5 | 1 | 04 |
| 21 | ಅಬಕಾರಿ ಉಪ ನಿರೀಕ್ಷಕರು | 16000-29600 | 631 | 266 | 365 |
| 22 | ಪ್ರಥಮ ದರ್ಜೆ ಸಹಾಯಕರು | 14550-26700 | 269 | 207 | 62 |
| 23 | ಶೀಘ್ರಲಿಪಿಗಾರರು | 14550-26700 | 52 | 35 | 17 |
| 24 | ದ್ವಿತೀಯ ದರ್ಜೆ ಸಹಾಯಕರು | 11600-21000 | 359 | 256 | 103 |
| 25 | ಟೈಪಿಸ್ಟ್ | 11600-21000 | 42 | 10 | 32 |
| 26 | ಹಿರಿಯ ಅಬಕಾರಿ ರಕ್ಷಕರು | 12500-24000 | 345 | 237 | 108 |
| 27 | ಅಬಕಾರಿ ರಕ್ಷಕರು | 11600-21000 | 2475 | 1463 | 1012 |
| 28 | ಹಿರಿಯ ವಾಹನ ಚಾಲಕರು | 14550-26700 | 83 | 61 | 22 |
| 29 | ವಾಹನ ಚಾಲಕರು | 11600-21000 | 359 | 123 | 236 |
| 30 | ಗ್ರೂಪ್ ಡಿ ನೌಕರರು | 9600-14550 | 95 | 70 | 25 |
| | **ಒಟ್ಟು** | | **5485** | **3145** | **2340** |

## 5.2 ಎ, ಬಿ, ಸಿ ಮತ್ತು ಡಿ ಗುಂಪುಗಳಲ್ಲಿನ ಹುದ್ದೆಗಳು ಮತ್ತು 2015-16 ರಲ್ಲಿನ ನಿವೃತ್ತಿಗಳು :

### 5.2.1 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳು.

| ಕ್ರ.ಸಂ | ಗ್ರೂಪ್ 'ಎ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2014-15ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 146 | 74 | 72 | - | 05 |

| ಕ್ರ.ಸಂ | ಗ್ರೂಪ್ 'ಬಿ' | | | | |
|---|---|---|---|---|---|
| | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಹುದ್ದೆಗಳು | (+) ಅಥವಾ (–) | 2014-15ನೇ ವರ್ಷದಲ್ಲಿ ಆದ ನಿವೃತ್ತಿಗಳು |
| 1. | 112 | 52 | 60 | - | 02 |

### 5.2.2 ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳು.

| ಕ್ರ. ಸಂ | ಪದನಾಮ | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಇರುವ ಹುದ್ದೆ | 2015-16 ನೇ ವರ್ಷದಲ್ಲಿ ಆದ ನಿವೃತ್ತಿಗಳು |
|---|---|---|---|---|---|
| 1 | ಅಬಕಾರಿ ನಿರೀಕ್ಷಕರು | 470 | 251 | 219 | 13 |
| 2 | ಅಬಕಾರಿ ಉಪ ನಿರೀಕ್ಷಕರು | 631 | 266 | 365 | 00 |
| 3 | ಕಛೇರಿ ಅಧೀಕ್ಷಕರು | 43 | 40 | 03 | 03 |
| 4 | ಕಿರಿಯ ರಾಸಾಯನಿಕ ತಜ್ಞರು | 02 | 00 | 00 | 00 |
| 5 | ಪ್ರಥಮ ದರ್ಜೆ ಸಹಾಯಕರು | 269 | 207 | 62 | 04 |
| 6 | ಶೀಘ್ರಲಿಪಿಗಾರರು | 52 | 35 | 17 | 00 |
| 7 | ದ್ವಿತೀಯ ದರ್ಜೆ ಸಹಾಯಕರು | 359 | 256 | 103 | 04 |
| 8 | ಪ್ರಯೋಗಶಾಲಾ ಸಹಾಯಕರು | 02 | 00 | 00 | 00 |
| 9 | ಬೆರಳಚ್ಚುಗಾರರು | 42 | 10 | 32 | 00 |
| 10 | ಅಬಕಾರಿ ಹಿರಿಯ ರಕ್ಷಕ | 345 | 237 | 108 | 08 |
| 11 | ಅಬಕಾರಿ ರಕ್ಷಕ | 2475 | 1463 | 1012 | 28 |
| 12 | ಹಿರಿಯ ವಾಹನ ಚಾಲಕ/ ವಾಹನ ಚಾಲಕ | 442 | 184 | 258 | 03 |
| 13 | ಗ್ರೂಪ್-ಡಿ | 95 | 70 | 25 | 02 |
| ಒಟ್ಟು | | **5227** | **3019** | **2208** | **65** |

## 5.3. ಗುಂಪುವಾರು ಮತ್ತು ಲಿಂಗವಾರು ಅಧಿಕಾರಿಗಳು ಮತ್ತು ಸಿಬ್ಬಂದಿ :

### 5.3.1. ಗುಂಪು 'ಎ' ಮತ್ತು 'ಬಿ' :

| ಗುಂಪು ಎ | | | | | |
|---|---|---|---|---|---|
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 54 | 20 | 74 | 7 | 03 | 10 |
| ಗುಂಪು ಬಿ | | | | | |
| ಪುರುಷರು | ಮಹಿಳೆಯರು | ಒಟ್ಟು | ಎಸ್. ಸಿ. | ಎಸ್. ಟಿ. | ಒಟ್ಟು |
| 47 | 5 | 52 | 14 | 5 | 19 |

### 5.3.2 ಗುಂಪು 'ಸಿ' ಮತ್ತು 'ಡಿ'

| ಕ್ರ.ಸಂ | ಪದನಾಮ | ಮಂಜೂರಾದ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಪುರುಷರು | ಮಹಿಳೆಯರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
|---|---|---|---|---|---|---|---|
| 1. | ಅಬಕಾರಿ ನಿರೀಕ್ಷಕರು | 470 | 251 | 197 | 54 | 36 | 10 |
| 2. | ಅಬಕಾರಿ ಉಪ ನಿರೀಕ್ಷಕರು | 631 | 266 | 180 | 86 | 44 | 8 |
| 3. | ಕಛೇರಿ ಅಧೀಕ್ಷಕರು | 43 | 40 | 23 | 17 | 6 | 04 |
| 4. | ಪ್ರಥಮ ದರ್ಜೆ ಸಹಾಯಕರು | 269 | 207 | 167 | 40 | 52 | 08 |
| 5. | ಕಿರಿಯ ಕೆಮಿಸ್ಟ್ | 02 | 00 | 00 | 00 | 00 | 0 |
| 6. | ಶೀಘ್ರಲಿಪಿಗಾರರು | 52 | 35 | 18 | 17 | 5 | 3 |
| 7. | ದ್ವಿತೀಯ ದರ್ಜೆ ಸಹಾಯಕರು | 359 | 256 | 185 | 71 | 62 | 14 |
| 8. | ಪ್ರಯೋಗಶಾಲಾ ಸಹಾಯಕರು | 02 | 00 | 00 | 00 | 00 | 00 |
| 9. | ಬೆರಳಚ್ಚುಗಾರರು | 42 | 10 | 07 | 03 | 04 | 0 |
| 10. | ಅಬಕಾರಿ ಹಿರಿಯ ರಕ್ಷಕ | 345 | 240 | 240 | 0 | 4 | 00 |
| 11. | ಅಬಕಾರಿ ರಕ್ಷಕ | 2475 | 1463 | 1376 | 87 | 312 | 108 |
| 12. | ಹಿರಿಯ ವಾಹನ ಚಾಲಕರು / ವಾಹನ ಚಾಲಕರು | 442 | 184 | 177 | 7 | 39 | 15 |
| 13. | ಗ್ರೂಪ್–ಡಿ | 95 | 70 | 31 | 39 | 18 | 5 |

## 5.4 ನೇಮಕಾತಿ :

### 5.4.1. ಅಬಕಾರಿ ಉಪ ನಿರೀಕ್ಷಕರು

177 ಅಬಕಾರಿ ಉಪ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ.

**5.4.2. ಅಬಕಾರಿ ರಕ್ಷಕರು**

ಸರ್ಕಾರವು 688 ಅಬಕಾರಿ ರಕ್ಷಕರ ಹುದ್ದೆಗಳನ್ನು ತುಂಬಲು ಆರ್ಥಿಕ ಸಹಮತಿ ನೀಡಿರುತ್ತದೆ. ಅದರಂತೆ ಪ್ರಸಕ್ತ ವರ್ಷದಲ್ಲಿ 688 ಅಬಕಾರಿ ರಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

**5.4.3 ವಾಹನ ಚಾಲಕರು**

ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಲ್ಲಿ 100 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಈ ಪೈಕಿ 45 ವಾಹನ ಚಾಲಕರು ಹುದ್ದೆಗಳಿಗೆ ನೇಮಕಾತಿ ಆದೇಶಗಳನ್ನು ನೀಡಿದ್ದು, ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ಅಬಕಾರಿ ಉಪ ಆಯುಕ್ತರಗಳಿಂದ ಕ್ರಮಕೈಗೊಳ್ಳಲಾಗುತ್ತಿದೆ.

ನೇರ ನೇಮಕಾತಿ ಅಡಿಯಲ್ಲಿ 188 ವಾಹನ ಚಾಲಕರ ಹುದ್ದೆಗಳನ್ನು ತುಂಬಲು ಸರ್ಕಾರವು ಆರ್ಥಿಕ ಸಹಮತಿ ನೀಡಿದ್ದು, ಈ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾ ಸಮಿತಿಯ ಅಧ್ಯಕ್ಷರುಗಳಿಗೆ (ಜಿಲ್ಲಾಧಿಕಾರಿಗಳು) ಸೂಚನೆಗಳನ್ನು ನೀಡಲಾಗಿರುತ್ತದೆ.

**5.5 ತರಬೇತಿ**

| Sl. No. | Training Subject | No. of officers/staffs deputed for the training. |
|---|---|---|
| 1. | Basic Computer, EST, Group 'D' responsible training in the month of April. | 08 |
| 2. | Basic Computer training in the month of May | 02 |
| 3. | Ethics in Administration in the month of June. | 01 |
| 4. | Basic training for Excise Sub-Inspectors at PTC Kalaburagi in the month of June | 161 |
| 5. | HRMS & CCA in the month of June | 08 |
| 6. | Budget, Tender, RTI, Computer & Service rules in the month of June | 05 |
| 7. | Information & communication technology in the month of August | 01 |
| 8. | Pension, Leave, Pay Allowance, CCA, Office procedure & cash section training in the month of August | 71 |
| 9. | Court matter, HRMS, Basic Computer, Sexual Harassment & Record room training in the month of August | 10 |
| 10. | NDPS training in the month of August | 20 |
| 11. | KTPP Act in the month of September | 03 |
| 12. | Basic training for Excise Guards at PTC Kalaburagi in the month of September | 282 |
| 13. | e-govera nce training in the month of September | 10 |

| | | |
|---|---|---|
| 14. | Appointment Rules, Seniority Roster & Income Tax Training in the month of October | 04 |
| 15. | Conduct Rules in the month of October | 09 |
| 16. | Change Management in the month of October | 09 |
| 17. | Organisation of Work shop/seminars in the month of October | 05 |
| 18. | e-Procurement training in the month of October | 02 |
| 19 | Alcometric training in the month of October | 90 |
| 20 | Experiential Learning Tools training in the month of November | 05 |
| 21 | Alcometric training in the month of November | 180 |
| 22 | Pension, Basic training in the month of November | 04 |
| 23 | Building Organisation Excellence training in the month of December | 10 |
| 24 | Contract Management training in the month of December | 03 |
| 25 | Retirement day & pension training, Service matter training in the month of December | 04 |
| 26 | Alcometric training in the month of December | 240 |
| 27 | Leadership and Team Building in the month of January | 10 |
| 28 | Course on RTI Act in the monthg of January | 10 |
| 29 | Financial Management in the month of January | 02 |
| 30 | RTI Act in the month of January | 02 |
| 31 | Alometric Training in the month of January | 120 |
| 32 | Course on Human Rights (DOPT) in the month of January | 10 |
| 33 | Alometric Training in the month of February | 150 |
| 34 | Computer Based Training in the month of February | 05 |
| 35 | NDPS in the month of MARCH | 35 |
| 36 | Number of Staffs deputed in District Levels for BVarious Training Programme (April 2015 to March 2016) | 305 |
| | **Total** | **1796** |

**5.6 ಬಾಹ್ಯಮೂಲದ ಆಧಾರದ ಮೇಲಿನ ಹುದ್ದೆಗಳು** :

1. **ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು**.

ಸರ್ಕಾರದ ಪತ್ರ ಸಂಖ್ಯೆ: ಆಇ/148/ಇಪಿಎಸ್/2010 ದಿನಾಂಕ: 06-12-2010 ರನ್ವಯ ಅಬಕಾರಿ ಇಲಾಖೆಯಲ್ಲಿನ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇರ ನೇಮಕಾತಿ ಹುದ್ದೆಗಳನ್ನು ಹೊರಗುತ್ತಿಗೆ (Out source) ಆಧಾರದಲ್ಲಿ ಭರ್ತಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ. ನೇರ ನೇಮಕಾತಿಗೆ ಖಾಲಿ ಇರುವ 8 ಬೆರಳಚ್ಚುಗಾರರ ಹುದ್ದೆಗಳನ್ನು ಬಾಹ್ಯ ಮೂಲದಿಂದ ಅಬಕಾರಿ ಆಯುಕ್ತರ ಕಛೇರಿಯಲ್ಲಿ ನೇಮಿಸಿಕೊಳ್ಳಲಾಗಿರುತ್ತದೆ.

5.7 ಪ್ರಶಸ್ತಿ / ಪದಕಗಳು:- ಇರುವುದಿಲ್ಲ -

5.8 ಅಧೀನ ಕಚೇರಿಗಳ ತಪಾಸಣೆ:

5.8.1. ಅಬಕಾರಿ ಜಂಟಿ ಆಯುಕ್ತರು / ಉಪ ಆಯುಕ್ತರು ನಡೆಸಿದ ತಪಾಸಣೆಗಳು:

| ಕ್ರ ಸಂ | ಹುದ್ದೆ | ತಪಾಸಣೆ ಮಾಡಿದ ಕಚೇರಿಗಳು. |
|---|---|---|
| 1 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಬೆಳಗಾವಿ ದಕ್ಷಿಣ ವಲಯ, ಬೆಳಗಾವಿ ಜಿಲ್ಲೆ(ದಿ:24/02/2016) |
| 2 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ರಾಮದುರ್ಗ ವಲಯ, ಬೆಳಗಾವಿ ಜಿಲ್ಲೆ (ದಿ:23/02/2016) |
| 3 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹಿರೇಕೆರೂರ್ ವಲಯ, ಹಾವೇರಿ ಜಿಲ್ಲೆ (ದಿ:22/02/2016) |
| 4 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಬ್ಯಾಡಗಿ ವಲಯ, ಹಾವೇರಿ ಜಿಲ್ಲೆ (ದಿ:27/01/2016) |
| 5 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹೊಳೆನರಸೀಪುರ ವಲಯ, ಹಾಸನ ಜಿಲ್ಲೆ (ದಿ:25/01/2016) |
| 6 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಚಾಮರಾಜನಗರ ವಲಯ, ಚಾಮರಾಜನಗರ ಜಿಲ್ಲೆ (ದಿ:20/01/2016) |
| 7 | ಅಬಕಾರಿ ಉಪ ಆಯುಕ್ತರು ಕಛೇರಿ, ದಾವಣಗೆರೆ ಜಿಲ್ಲೆ | ಅಬಕಾರಿ ನಿರೀಕ್ಷಕರ ಕಛೇರಿ, ಹರಪನಹಳ್ಳಿ ವಲಯ, ದಾವಣಗೆರೆ ಜಿಲ್ಲೆ (ದಿ:12/01/2016) |
| 8 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ನಂಜನಗೂಡು ವಲಯ,ಮೈಸೂರು ಜಿಲ್ಲೆ (ದಿ:16/12/2015) |
| 9 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಶಿಗ್ಗಾವಿ ವಲಯ, ಬೆಳಗಾವಿ ಜಿಲ್ಲೆ(ದಿ:19/11/2015) |
| 10 | ಅಬಕಾರಿ ಜಂಟಿ ಆಯುಕ್ತರು(ಇ&ಐ)ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮೈಸೂರು ವಲಯ-4, ಮೈಸೂರು ಜಿಲ್ಲೆ(ದಿ:23/11/2015) |
| 11 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಧಾರವಾಡ ಜಿಲ್ಲೆ(ದಿ:20/11/2015) &21/11/2015) |
| 12 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಚಿಕ್ಕೋಡಿ ವಲಯ, ಬೆಳಗಾವಿ ಜಿಲ್ಲೆ(ದಿ:26/11/2015) |
| 13 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮೈಸೂರು ವಲಯ-3, ಮೈಸೂರು ಜಿಲ್ಲೆ(ದಿ:26/11/2015) |
| 14 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹುಬ್ಬಳ್ಳಿ ವಲಯ, ಧಾರವಾಡ ಜಿಲ್ಲೆ(ದಿ:23/09/2015) |
| 15 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ. ಹಾವೇರಿ ಜಿಲ್ಲೆ (ದಿ:21/09/2015) |
| 16 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಟಿ-ನರಸೀಪುರ ವಲಯ, ಮೈಸೂರು ಜಿಲ್ಲೆ(ದಿ:08/07/2015) |
| 17 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕೆ.ಆರ್.ಪೇಟೆ ವಲಯ, ಮೈಸೂರು ಜಿಲ್ಲೆ(ದಿ:22/07/2015) |
| 18 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ನಾಗಮಂಗಲ ವಲಯ,ಮಂಡ್ಯ ಜಿಲ್ಲೆ(ದಿ:25/04/2015) |
| 19 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಚನ್ನರಾಯಪಟ್ಟಣ ವಲಯ, ಹಾಸನ ಜಿಲ್ಲೆ, (ದಿ:30/04/2015) |
| 20 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಶ್ರೀರಂಗಪಟ್ಟಣ ವಲಯ, ಮಂಡ್ಯ ಜಿಲ್ಲೆ (ದಿ:27-04-2015) |

| | | |
|---|---|---|
| 21 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ಉಪ ಆಯುಕ್ತರ ಕಛೇರಿ, ಧಾರವಾಡ ಜಿಲ್ಲೆ(ದಿ:22/05/2015) |
| 22 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಬೆಳಗಾವಿ ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಹಾವೇರಿ ವಲಯ, ಹಾವೇರಿ ಜಿಲ್ಲೆ (ದಿ:23–09–2015) |
| 23 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಅರಸೀಕೆರೆ ವಲಯ, ಹಾಸನ ಜಿಲ್ಲೆ (ದಿ:30–05–2015) |
| 24 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮದ್ದೂರು ವಲಯ, ಮಂಡ್ಯ ಜಿಲ್ಲೆ (ದಿ:23–06–2015) |
| 25 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮಳವಳ್ಳಿ ವಲಯ, ಮಂಡ್ಯ ಜಿಲ್ಲೆ (ದಿ:26–06–2015) |
| 26 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರು ವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಮೂಡಿಗೆರೆ ವಲಯ, ಚಿಕ್ಕಮಗಳೂರು ಜಿಲ್ಲೆ (ದಿ:12–06–2015) |
| 27 | ಅಬಕಾರಿ ಜಂಟಿ ಆಯುಕ್ತರು(ಇ&ಐ),ಮೈಸೂರುವಿಭಾಗ | ಅಬಕಾರಿ ನಿರೀಕ್ಷಕರ ಕಛೇರಿ, ಕೊಪ್ಪ ವಲಯ, ಚಿಕ್ಕಮಗಳೂರು ಜಿಲ್ಲೆ (ದಿ:21–05–2015) |

# ಅಧ್ಯಾಯ – 6

## 6.1 ಅಧೀನ ಕಛೇರಿಗಳ ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಕಛೇರಿ ತಪಾಸಣೆ.

### 6.1.1 ಈ ಕಛೇರಿಯ ಸಿಬ್ಬಂದಿ ಮತ್ತು ಲೆಕ್ಕ ವಿಭಾಗದ ಸಿಬ್ಬಂದಿಯವರಿಂದ ಅದೀನ ಕಛೇರಿ ತಪಾಸಣೆ ಮತ್ತು ಆಂತರಿಕ ಲೆಕ್ಕ ಪರಿಶೋದನೆಗೆ ಒಳಪಟ್ಟಿರುವ ಕಛೇರಿಗಳು.

| ಕಛೇರಿ | ಸಂಖ್ಯೆ |
|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | 0 |
| ಉಪ ವಿಭಾಗಗಳು | 0 |
| ವಲಯ ಕಛೇರಿಗಳು | 0 |
| ಡಿಸ್ಟಲರಿ | 1 |
| **ಒಟ್ಟು** | **1** |

### 6.1.2 ಹಣ ಮೌಲ್ಯವನ್ನು ಒಳಗೊಂಡ ಕಂಡಿಕೆಗಳು ಮತ್ತು ಮೊತ್ತ :

| ಕಛೇರಿ | ಕಂಡಿಕೆಗಳು | ಮೊತ್ತ (ರೂ.) |
|---|---|---|
| ಅಬಕಾರಿ ಜಂಟಿ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ವಲಯಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ರಾಜ್ಯ ವಿಚಕ್ಷಣ ದಳ | ಇಲ್ಲ | ಇಲ್ಲ |
| **ಒಟ್ಟು** | **ಇಲ್ಲ** | **ಇಲ್ಲ** |

### 6.1.3 ಇತ್ಯರ್ಥಗೊಂಡ ಅಡಿಟ್ ಪ್ಯಾರಗಳು ಹಾಗೂ ಮೌಲ್ಯ :

| ಕಛೇರಿ | ಕಂಡಿಕೆಗಳು | ಮೊತ್ತ (ರೂ.) |
|---|---|---|
| ಅಬಕಾರಿ ಉಪ ಆಯುಕ್ತರ ಕಛೇರಿಗಳು | ಇಲ್ಲ | ಇಲ್ಲ |
| ಉಪ ವಿಭಾಗಗಳು | ಇಲ್ಲ | ಇಲ್ಲ |
| ಭಟ್ಟಿ ಕಾರ್ಖಾನೆಗಳು | ಇಲ್ಲ | ಇಲ್ಲ |
| **ಒಟ್ಟು** | **ಇಲ್ಲ** | **ಇಲ್ಲ** |

## 6.2 ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನಗಳಲ್ಲಿ ಸ್ವೀಕರಿಸಲಾದ / ಉತ್ತರಿಸಲಾದ ಪ್ರಶ್ನೆಗಳು:

| ಅಧಿವೇಶನ | ಚುಕ್ಕೆ ಗುರುತಿನ ಪ್ರಶ್ನೆಗಳು | | ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು | |
|---|---|---|---|---|
| | ಸ್ವೀಕೃತ | ಉತ್ತರಿಸಲಾದ | ಸ್ವೀಕೃತ | ಉತ್ತರಿಸಲಾದ |
| ವಿಧಾನ ಸಭೆ | 13 | 13 | 102 | 102 |
| ವಿಧಾನ ಪರಿಷತ್ | 10 | 10 | 62 | 62 |

ಎಲ್ಲಾ ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಅಧಿವೇಶನಗಳಲ್ಲಿ ಸ್ವೀಕೃತವಾದ ಪ್ರಶ್ನೆಗಳಿಗೆ ಸರ್ಕಾರಕ್ಕೆ ಉತ್ತರವನ್ನು ಸಲ್ಲಿಸಲಾಗಿರುತ್ತದೆ.

## 6.3 ವಿವಿಧ ನ್ಯಾಯಾಲಯಗಳು ಹಾಗೂ ಟ್ರಿಬ್ಯೂನಲ್‌ಗಳಲ್ಲಿ ಇಲಾಖೆ ವತಿಯಿಂದ ಹಾಗೂ ಇಲಾಖೆಯ ವಿರುದ್ಧವಾಗಿ ಇರುವ ಪ್ರಕರಣಗಳು

### 6.3.1 ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ (ರಿಟ್ ವಿಭಾಗ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 6 |
| ಸ್ವೀಕರಿಸಲಾದ ಪ್ರಕರಣಗಳು | 1 |
| **ಒಟ್ಟು** | **07** |
| ಆದೇಶಗಳನ್ನು ಹೊರಡಿಸಿರುವುದು | 02 |
| **ಬಾಕಿ ಪ್ರಕರಣಗಳು (31-03-2016 ರಲ್ಲಿದ್ದಂತೆ)** | **05** |

### 6.3.2 ಕರ್ನಾಟಕ ಆಡಳಿತ ಮಂಡಳಿಯಲ್ಲಿ (ಕೆಎಟಿ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 283 |
| ಸ್ವೀಕರಿಸಲಾದ ಪ್ರಕರಣಗಳು | 60 |
| **ಒಟ್ಟು** | 343 |
| ಆದೇಶಗಳನ್ನು ಹೊರಡಿಸಿರುವುದು | 128 |
| **ಬಾಕಿ ಪ್ರಕರಣಗಳು (31-03-2016 ರಲ್ಲಿದ್ದಂತೆ)** | **215** |

6.3.3 ಅಬಕಾರಿ ಆಯುಕ್ತರ ನ್ಯಾಯಾಲಯದಲ್ಲಿ (ಮನವಿ) ದಾಖಲಿಸಲಾದ ಪ್ರಕರಣಗಳು.

| ವಿವರಗಳು | ಪ್ರಕರಣಗಳ ಸಂಖ್ಯೆ |
|---|---|
| ಪ್ರಾರಂಭಿಕ ಶಿಲ್ಕು | 78 |
| ಸ್ವೀಕರಿಸಲಾದ ಪ್ರಕರಣಗಳು | 752 |
| **ಒಟ್ಟು** | **830** |
| ಆದೇಶಗಳನ್ನು ಹೊರಡಿಸಿರುವುದು | 274 |
| **ಬಾಕಿ ಪ್ರಕರಣಗಳು (31-03-2016 ರಲ್ಲಿದ್ದಂತೆ)** | **556** |

## 6.4 ಮಾಹಿತಿ ಹಕ್ಕು ಅಧಿನಿಯಮದ ಜಾರಿ:

ಮಾಹಿತಿ ಹಕ್ಕು ಅಧಿನಿಯಮದಡಿ 01-04-2015 ರಿಂದ 31-03-2016 ರವರೆಗೆ ಸ್ವೀಕರಿಸಲಾದ ಆರ್.ಟಿ.ಐ ಅರ್ಜಿಗಳ ವಿವರ

| ಕ್ರ. ಸಂ. | ವಿವರಗಳು | ಸಂಖ್ಯೆ |
|---|---|---|
| 1. | ಪ್ರಾರಂಭಿಕ ಶಿಲ್ಕು | 107 |
| 2. | ಸ್ವೀಕೃತ ಒಟ್ಟು ಅರ್ಜಿಗಳು | 586 |
| 3. | ಉತ್ತರಿಸಲಾದ ಅರ್ಜಿಗಳು | 540 |
| 4. | ಅರ್ಜಿದಾರರಿಂದ ನಿಗದಿತ ಶುಲ್ಕಪಾವತಿಯಾಗದಿರುವುದು. | 86 |
| 5. | ನಿಯಮ 8(1)(ಹೆಚ್) ಮತ್ತು ನಿಯಮ 14ರಡಿ ಉತ್ತರಿಸಲಾದ ಅರ್ಜಿಗಳು | 56 |
| 6. | ಬಾಕಿ (30 ದಿನಗಳ ಸಮಯದ ಒಳಗೆ) | 11 |
| 7. | ಮಾಹಿತಿ ಆಯೋಗದಲ್ಲಿ ಮೇಲ್ಮನವಿಗಾಗಿ ಇರುವ ಬಾಕಿ ಅರ್ಜಿಗಳು | 01 |

**ಸಹಿ/-**

**ಅಬಕಾರಿ ಆಯುಕ್ತರು**